**AUGUST 18, 2024**

**AKASHAVANI - DHARWAD**

**PRADESH SAMACHARA (KANNADA) 07.05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **‘ಮುಡಾ’** ನಿವೇಶನ ಹಂಚಿಕೆ ವಿವಾದ; ಮುಖ್ಯಮಂತ್ರಿ ವಿರುದ್ಧ, ಪ್ರಕರಣ ದಾಖಲಿಸಲು, ರಾಜ್ಯಪಾಲರ ಅನುಮತಿ.
- **ರಾಜ್ಯಪಾಲರಿಂದ ಪ್ರಾಸಿಕ್ಯೂ ’ನ್‌ಗೆ** ಅನುಮತಿ; ಕಾನೂನು ಹೋರಾಟಕ್ಕೆ ಸಿದ್ಧ – ಮುಖ್ಯಮಂತ್ರಿ.
- **ವೈದ್ಯಕೀಯ ವಿದ್ಯಾರ್ಥಿನಿ** ಹತ್ಯೆ ಪ್ರಕರಣ; ಈ ಬೆಳಗ್ಗೆ 6 ಗಂಟೆಗೆ, ಅಂತ್ಯವಾದ ವೈದ್ಯರ ಮುಷ್ಕರ.
- **‘ಸಮುದಾಯ ಬಾನುಲಿ’ ಕುರಿತ,** ರಾಜ್ಯ ಸಮ್ಮೇಳನಕ್ಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಚಾಲನೆ.

<><><>

**ಈಗ ವಾರ್ತೆಗಳ ವಿವರ**

<><><>

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ‘ಮುಡಾ’** ನಿವೇಶನ ಹಂಚಿಕೆ ಪ್ರಕರಣದಲ್ಲಿ, ಆರೋಪ ಎದುರಿಸುತ್ತಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ, ಕ್ರಿಮಿನಲ್ ಪ್ರಕರಣ ದಾಖಲಿಸಲು, ರಾಜ್ಯಪಾಲ ಥಾವರಚಂದ ಗೆಹ್ಲೋಟ ಅನುಮತಿಸಿದ್ದಾರೆ. ಅಧಿಕೃತ ಪತ್ರವನ್ನು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತಿಕ್ ಅವರಿಗೆ ರಾಜ್ಯಪಾಲರು ರವಾನಿಸಿದ್ದಾರೆ.

<><><>

**ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿಸಿರುವ ಕ್ರಮವನ್ನು** ಖಂಡಿಸಿ, ನಾಳೆ ಸೋಮವಾರ ಬೆಳಗ್ಗೆ 11 ಗಂಟೆಗೆ, ರಾಜ್ಯಾದ್ಯಂತ ಕಾಂಗ್ರೆಸ್ ಪ್ರತಿಭಟಿಸಲಿದೆ ಎಂದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

<><><>

**ರಾಜ್ಯಪಾಲರು ತಮ್ಮ ವಿರುದ್ಧ ಪ್ರಾಸಿಕ್ಯೂ ’ನ್‌ಗೆ** ಅನುಮತಿ ನೀಡಿರುವ ವಿರುದ್ಧ, ಕಾನೂನು ಹೋರಾಟ ನಡೆಸುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಹೇಳಿದ್ದಾರೆ. ಚುನಾಯಿತ ಸರ್ಕಾರವನ್ನು ಅಭದ್ರಗೊಳಿಸುವ ಹುನ್ನಾರ ಇದಾಗಿದೆ. ತಮ್ಮ ವಿರುದ್ಧ ದೂರು ಬಂದ ದಿನವೇ, ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ರಾಜ್ಯಪಾಲರ ಈ ನಡೆ ನಿರೀಕ್ಷಿತ ಎಂದರು. ಶಾಸಕರು, ಸಂಪುಟ ಸಚಿವರು, ಪಕ್ಷದ ವರಿ ್ಠರು ತಮ್ಮ ಪರವಾಗಿದ್ದಾರೆ. ಹೀಗಾಗಿ ರಾಜಿನಾಮೆ ನೀಡುವ ಪ್ರಶ್ನೆಯೇ ಇಲ್ಲ. ರಾಜ್ಯಪಾಲರನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುವುದು ಸರಿಯಲ್ಲ. ಬಿಜೆಪಿ, ಜೆಡಿಎಸ್ ಪಕ್ಷಗಳಿಗೆ ತಮ್ಮ ರಾಜಿನಾಮೆ ಕೇಳುವ ನೈತಿಕ ಹಕ್ಕಿಲ್ಲ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಸಹಿಸಲು ಆಗುತ್ತಿಲ್ಲ ಎಂದು, ಮುಖ್ಯಮಂತ್ರಿ ಆರೋಪಿಸಿದರು.

<><><>

**ರಾಜ್ಯಪಾಲರು, ಮುಡಾ ಭ್ರ ್ಟಾಚಾರದ ವಿಚಾರವಾಗಿ,** ಮುಖ್ಯಮಂತ್ರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡಿದ್ದಾರೆ; ಸಿದ್ದರಾಮಯ್ಯನವರು ತನಿಖೆಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕು ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಪ್ರತಿಕ್ರಿಯಿಸಿದ್ದಾರೆ.

<><><>

**ಸಿದ್ದರಾಮಯ್ಯನವರು ತಮ್ಮ ಸ್ಥಾನಕ್ಕೆ** ರಾಜಿನಾಮೆ ನೀಡಿ, ಪಾರದರ್ಶಕ ಮತ್ತು ನಿ ್ಪಕ್ಷಪಾತ ನ್ಯಾಯಾಂಗ ಪ್ರಕ್ರಿಯೆಗೆ ಸಹಕರಿಸಬೇಕು ಎಂದು, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.

<><><>

**ವಿಧಾನ ಪರಿ ’ತ್ ವಿಪಕ್ಷ ನಾಯಕ** ಛಲವಾದಿ ನಾರಾಯಣ ಸ್ವಾಮಿ, ಕೊಪ್ಪಳದಲ್ಲಿ ಪ್ರತಿಕ್ರಿಯಿಸಿದ್ದು, ಮುಖ್ಯಮಂತ್ರಿ ಅವರ ಮೇಲೆ ಪ್ರಕರಣ ದಾಖಲಿಸಲು, ರಾಜ್ಯಪಾಲರು ಅನುಮತಿ ನೀಡಿದ್ದು ಸ್ವಾಗತಾರ್ಹ ಎಂದರು.

<><><>

**ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ** ಹಾಗೂ ಉತ್ತರಕನ್ನಡ ಜಿಲ್ಲೆ ಸಂಸದ ವಿಶ್ವೇಶ್ವರ ಹೆಗಡೆ, ಕಾಗೇರಿ ಪ್ರತಿಕ್ರಿಯಿಸಿ, ಮುಖ್ಯಮಂತ್ರಿಗಳು ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡುವ ಮೂಲಕ, ನಿ ್ಪಕ್ಷಪಾತ ತನಿಖೆಗೆ ಅವಕಾಶ ಮಾಡಿಕೊಡಬೇಕು ಎಂದರು.

<><><>

**ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ** ಅವರ ವಿರುದ್ಧ ವಿಚಾರಣೆಗೆ ಅನುಮತಿ ನೀಡಿರುವುದು ಸ್ವಾಗತಾರ್ಹ ಎಂದು ಜೆ.ಡಿ.ಎಸ್. ತಿಳಿಸಿದೆ.

<><><>

**ಕೊಪ್ಪಳ ಜಿಲ್ಲೆ ಮುನಿರಾಬಾದ್ ಹಾಗೂ** ವಿಜಯನಗರ ಜಿಲ್ಲೆ, ಹೊಸಪೇಟೆ ವ್ಯಾಪ್ತಿಯ, ತುಂಗಭದ್ರಾ ಅಣೆಕಟ್ಟೆಯ, 19ನೇ ಕ್ರಸ್ಟ್ ಗೇಟ್‌ಗೆ ಪೂರಕವಾಗಿ, ಐದು ಫಲಕಗಳ ಸ್ಟಾಪ್ ಲಾಕ್ ಅಳವಡಿಕೆಯ ಕಾರ್ಯ, ನಿನ್ನೆ ಪೂರ್ಣಗೊಂಡಿದೆ. 6ನೇ ಫಲಕವನ್ನು ಇಂದು ಅಳವಡಿಸಲಾಗುತ್ತಿದೆ.

**ಕಾಲಮಿತಿಯೊಳಗೆ ನೀರಿನ ಹೊರ ಹರಿವು** ನಿಲ್ಲಿಸಿದ, ಕನ್ನಯ್ಯ ನಾಯ್ಡು ಹಾಗೂ ತಜ್ಞರ ತಂಡವನ್ನು ಮುಖ್ಯಮಂತ್ರಿ ಅಭಿನಂದಿಸಿದ್ದಾರೆ.

**ತುಂಗಭದ್ರಾ ಅಣೆಕಟ್ಟೆಯ ವಿಭಾಗೀಯ** ಅಭಿಯಂತರ ರಾಘವೇಂದ್ರ, ಪ್ರದೇಶ ಸಮಾಚಾರಕ್ಕಾಗಿ, ಸದ್ಯದ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಿದ್ದಾರೆ.

<><><>

**ರಾಘವೇಂದ್ರ ಧ್ವನಿ 33 ಸೆಕೆಂದುಗಳು**

<><><>

**ವಿಜಯಪುರ ಜಿಲ್ಲೆ, ನಿಡಗುಂದಿ ತಾಲೂಕು** ಆಲಮಟ್ಟಿಯ, ಶ್ರೀ ಲಾಲ ಬಹದ್ದೂರ ಶಾಸ್ತ್ರಿ ಅಣೆಕಟ್ಟೆ, ಸಂಪೂರ್ಣ ಮೈದುಂಬಿದೆ. ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕ, ಕೆ.ಪಿ. ಮೋಹನ್‌ರಾಜ್, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಕೆ.ಪಿ. ಮೋಹನ್ ರಾಜ್ ಧ್ವನಿ 35 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕೋಲ್ಕೊತ್ತದಲ್ಲಿ, ವೈದ್ಯಕೀಯ ವಿದ್ಯಾರ್ಥಿನಿ** ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ, ಹತ್ಯೆ ಗೈದ ಪ್ರಕರಣ ಖಂಡಿಸಿ, ಭಾರತೀಯ ವೈದ್ಯಕೀಯ ಸಂಘ ಕರೆ ನೀಡಿದ್ದ ಪ್ರತಿಭಟನೆಗೆ, ರಾಜ್ಯಾದ್ಯಂತ ವೈದ್ಯರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು. ರಾಜ್ಯಾದ್ಯಂತ ಇಂದು ಬೆಳಗ್ಗೆ ಆರು ಗಂಟೆಯ ವರೆಗೆ, ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ ಹೊರ ರೋಗಿ ವಿಭಾಗದ ತಪಾಸಣೆ ಬಂದ್ ಮಾಡಿ, ವೈದ್ಯರು ಸಹಾನುಭೂತಿ ಮತ್ತು ಕಳವಳ ವ್ಯಕ್ತ ಪಡಿಸಿದರು.

ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ಹತ್ಯೆಗೀಡಾದ ವೈದ್ಯಕೀಯ ವಿದ್ಯಾರ್ಥಿನಿ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ವೈದ್ಯಕೀಯ ವಿದ್ಯಾರ್ಥಿಗಳು ಆಗ್ರಹಿಸಿದರು. ವಿವಿಧ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು. ರಾತ್ರಿ ಪಾಳೆಯಲ್ಲಿ ಕಾರ್ಯ ನಿರ್ವಹಿಸುವ ಮಹಿಳಾ ವೈದ್ಯರು ಹಾಗೂ ವಿದ್ಯಾರ್ಥಿನಿಯರಿಗೆ ಸೂಕ್ತ ರಕ್ಷಣೆ ನೀಡುವಂತೆ, ಮುಷ್ಕರ ನಿರತ ವೈದ್ಯರು ಒತ್ತಾಯಿಸಿದರು.

<><><>

**ಮಡಿಕೇರಿ, ಮಂಗಳೂರು, ಉತ್ತರಕನ್ನಡ ಸೇರಿದಂತೆ,** ಕಿತ್ತೂರು ಕರ್ನಾಟಕ ಭಾಗದ ಧಾರವಾಡ, ಗದಗ, ಹಾವೇರಿ, ಬೆಳಗಾವಿ ಸೇರಿದಂತೆ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ನಿನ್ನೆ ಬೆಳಗ್ಗೆಯಿಂದ, ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ, ಹೊರ ರೋಗಿಗಳ ತಪಾಸಣೆ ಬಂದ್ ಮಾಡಿ, ತುರ್ತು ಸೇವೆಗಳನ್ನು ಮಾತ್ರ ಒದಗಿಸಿದರು. ಕೆಲವೆಡೆ ಆರೋಗ್ಯಾಕಾಂಕ್ಷಿಗಳು ಪರದಾಡಿದ ವರದಿಗಳು ಬಂದಿವೆ.

<><><>

**ಜಿಲ್ಲಾ ಮಟ್ಟದ ಸರ್ಕಾರಿ ಆಸ್ಪತ್ರೆಗಳು** ಮತ್ತು ಗ್ರಾಮೀಣ ಪ್ರದೇಶದ ಎಲ್ಲ ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ವೈದ್ಯರು ಕೈಗೆ ಕಪ್ಪುಪಟ್ಟಿ ಧರಿಸಿ, ದೈನಂದಿನ ಕರ್ತವ್ಯ ನಿರ್ವಹಿಸಿ, ಶ್ರೀ ಸಾಮಾನ್ಯರಿಗೆ ತೊಂದರೆಯಾಗದಂತೆ ಮುಷ್ಕರದಲ್ಲಿ ಪಾಲ್ಗೊಂಡರು.

<><><>

**ಧಾರವಾಡದ ಕೃಷಿ ವಿಶ್ವವಿದ್ಯಾಲಯ** ಸಂಚಾಲಿತ, ಕೃಷಿ ಎಫ್.ಎಮ್. 90.4 ಕೃಷಿ ಸಮುದಾಯ ಬಾನುಲಿ ಕೇಂದ್ರ, 'ಸಮುದಾಯ ಬಾನುಲಿ ಬೆಳವಣಿಗೆ; ಅವಕಾಶಗಳು ಮತ್ತು ಸವಾಲುಗಳು' ಧ್ಯೇಯದೊಂದಿಗೆ ಆಯೋಜಿಸಿರುವ, 2 ದಿನಗಳ

ರಾಜ್ಯ ಸಮ್ಮೇಳನದಲ್ಲಿ, ರಾಜ್ಯದ 20 ಸಮುದಾಯ ಬಾನುಲಿ ಕೇಂದ್ರಗಳ ಕಾರ್ಯಕ್ರಮ ಅಧಿಕಾರಿಗಳು ಹಾಗೂ ಮುಖ್ಯಸ್ಥರು ಪಾಲ್ಗೊಂಡಿದ್ದಾರೆ. ಕೃಷಿ ಸಮುದಾಯ ಬಾನುಲಿ ಕೇಂದ್ರದ ಮುಖ್ಯಸ್ಥೆ ಡಾಕ್ಟರ್ ಸುರೇಖಾ ಸಂಕನಗೌಡರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಸುರೇಖಾ ಸಂಕನಗೌಡರ ಧ್ವನಿ 48 ಸೆಕೆಂದುಗಳು**

<><><>

**ಆಕಾಶವಾಣಿ ಬೆಂಗಳೂರು ಕೇಂದ್ರದ ಸಂಗೀತೋತ್ಸವ,** ಇಂದಿರಾನಗರ ಸಂಗೀತ ಸಭಾದ, ಪುರಂದರ ಭವನದಲ್ಲಿ ಜರುಗಿತು. ಕರ್ನಾಟಕ ವಾದ್ಯ ಸಂಗೀತ ಕಛೇರಿ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮವನ್ನು, ಆಕಾಶವಾಣಿ ದಕ್ಷಿಣ ವಿಭಾಗದ, ಮಹಾ ನಿರ್ದೇಶಕ ಅನಿಲಕುಮಾರ ಮಂಗಳಗಿ ಹಾಗೂ ಆಕಾಶವಾಣಿ ಕಾರ್ಯಕ್ರಮ ವಿಭಾಗದ, ಸಹಾಯಕ ನಿರ್ದೇಶಕ ಎ. ಎಸ್. ಶಂಕರ ನಾರಾಯಣ ಹಾಗೂ ಇಂದಿರಾ ನಗರ ಸಂಗೀತ ಸಭಾದ ಅಧ್ಯಕ ಬಾಲ ಸುಬ್ರಮಣ್ಯಮ್, ಉದ್ಘಾಟಿಸಿದರು. ಹಿರಿಯ ಕಲಾವಿದರು ಪಾಲ್ಗೊಂಡಿದ್ದರು.

<><><>

**ಬೆಂಗಳೂರಿನ ನವಕರ್ನಾಟಕ ಪ್ರಕಾಶನದ** ವ್ಯವಸ್ಥಾಪಕ ನಿರ್ದೇಶಕರಾಗಿದ್ದ, ಆರ್.ಎಸ್. ರಾಜಾರಾಮ, ಬೆಂಗಳೂರಿನ ಅಬ್ಬಿಗೆರೆಯ ತಮ್ಮ ನಿವಾಸದಲ್ಲಿ ನಿನ್ನೆ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. ರಾಜ್ಯದ ಪುಸ್ತಕ ಪ್ರಕಾಶನ ಲೋಕಕ್ಕೆ ಹೊಸ ಮಾರ್ಗ, ವೈಚಾರಿಕ ದೃಷ್ಟಿಕೋನ ಒದಗಿಸಿದ, ರಾಜಾರಾಮ ಅವರು, ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನವಕರ್ನಾಟಕ ಪ್ರಕಾಶನ ಸಂಸ್ಥೆಯನ್ನು ಮುನ್ನಡೆಸಿದರು. ಮಂಗಳೂರು ಮತ್ತು ಪುತ್ತೂರಿನಲ್ಲಿ ವಿದ್ಯಾಭ್ಯಾಸ ಮಾಡಿದವರು. ಇಂದು ಬೆಳಗ್ಗೆ 11.30ಕ್ಕೆ ಬೆಂಗಳೂರಿನ ಹೆಬ್ಬಾಳದ ಚಿತಾಗಾರದಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಸಂಕ್ಷಿಪ್ತ ಸುದ್ದಿಗಳು**

<><><>

**ಬೆಳಗಾವಿ ಜಿಲ್ಲೆ ಹತ್ತರಗಿ ಬಳಿ,** ಸೋಯಾ ಅವರೆ ಬೆಳೆಗೆ, ಏಕ ಕಾಲಕ್ಕೆ 36 ಡ್ರೋನ್‌ಗಳ ಮೂಲಕ, ಪೋ ಕಾಂಶ ಸಿಂಪರಣೆ ಕಾರ್ಯಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಹೊಸ ತಂತ್ರಜ್ಞಾನ ಬಳಕೆ, ರೈತರ ಕೃಷಿ ಚಟುವಟಿಕೆಗಳ ವೇಗ ವರ್ಧಿಸಲು, ಸಹಕಾರಿಯಾಗಲಿದೆ ಎಂದರು.

<><><>

**ಹವಾಮಾನ ವೈಪರಿತ್ಯ ಹಾಗೂ ಮಾರುಕಟ್ಟೆ** ದರಗಳ ಏರುಪೇರು ನಿಭಾಯಿಸಿ, ರೈತರ ಬೆಳೆಯನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು, 15 ಶೀತಲೀಕರಣ ಘಟಕ ನಿರ್ಮಿಸಲು ಯೋಜಿಸಲಾಗಿದೆ ಎಂದು ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣವರ ತಿಳಿಸಿದ್ದಾರೆ. ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಚಿಕ್ಕಬಾಸೂರು ಎ.ಪಿ.ಎಂ.ಸಿ. ಉಪ ಮಾರುಕಟ್ಟೆಯ ಆವರಣದಲ್ಲಿ, ನೂತನ ಶೀತಲೀಕರಣ ಘಟಕ ನಿರ್ಮಾಣ ಕಾಮಗಾರಿಗೆ, ಭೂಮಿ ಪೂಜೆ ನೆರವೇರಿಸಿ, ಮಾತನಾಡಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಮುಡಾ’** ನಿವೇಶನ ಹಂಚಿಕೆ ವಿವಾದ; ಮುಖ್ಯಮಂತ್ರಿ ವಿರುದ್ಧ, ಪ್ರಕರಣ ದಾಖಲಿಸಲು, ರಾಜ್ಯಪಾಲರ ಅನುಮತಿ.
- **ರಾಜ್ಯಪಾಲರಿಂದ ಪ್ರಾಸಿಕ್ಯೂ ’ನ್‌ಗೆ** ಅನುಮತಿ; ಕಾನೂನು ಹೋರಾಟಕ್ಕೆ ಸಿದ್ಧ – ಮುಖ್ಯಮಂತ್ರಿ.
- **ವೈದ್ಯಕೀಯ ವಿದ್ಯಾರ್ಥಿನಿ** ಹತ್ಯೆ ಪ್ರಕರಣ; ಈ ಬೆಳಗ್ಗೆ 6 ಗಂಟೆಗೆ, ವೈದ್ಯರ ಮುಷ್ಕರ ಅಂತ್ಯ.
- **‘ಸಮುದಾಯ ಬಾನುಲಿ’ ಕುರಿತ,** ರಾಜ್ಯ ಸಮ್ಮೇಳನಕ್ಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಚಾಲನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>